




## ಗೂಗ್ಲ್ ಟ್ರಾನ್ಸ್‌ಲೇಟ್

ಆಫ್‌ಲೈನ್ ಇದ್ದಾಗಲೂ ಇದು ಕೆಲಸ ಮಾಡುತ್ತದೆ. ಫೋನ್ ಕ್ಯಾಮೆರಾ ಮೂಲಕ ವಿದೇಶಗಳಲ್ಲೂ ರಸ್ತೆಯಲ್ಲಿ ಸಂಕೇತಗಳನ್ನು ಓದಿ ತರ್ಜುಮೆ ಮಾಡುತ್ತದೆ. ಕೆಲವೇ ದಿನಗಳಲ್ಲಿ ಇದು ಲಭ್ಯವಾಗಲಿದ್ದು, ಐಒಎಸ್ ಹಾಗೂ ಆ್ಯಂಡ್ರಾಯ್ಡ್ ಬಳಕೆದಾರರು ಬಳಸಬಹುದು. ಅನ್ಯ ಭಾಷೆಯಲ್ಲಿ ಸಂಭಾಷಣೆ ನಡೆಸುವವರ ಜೊತೆಯೂ ತಕ್ಷಣ ಮಾತನಾಡಬಹುದು ಹಾಗೂ ಸಂಕೇತಗಳು ನಿಮ್ಮ ಭಾಷೆಗೆ ಭಾಷಾಂತರಗೊಳ್ಳುತ್ತವೆ. ಮೊದಲು ಬಳಕೆದಾರ ತನ್ನ ಭಾಷೆ ಹಾಗೂ ಸಂಭಾಷಣೆ ನಡೆಸಬೇಕಾದವರ ಭಾಷೆ ಆಯ್ಕೆ ಮಾಡಿ ಮೈಕ್ರೊಫೋನ್ ಐಕಾನ್ ಮೇಲೆ ಕುಟ್ಟಬೇಕು. ಮಾತನಾಡಲು ಶುರು ಮಾಡಿದಾಗಲೂ ಅದನ್ನು ಕುಟ್ಟಬೇಕು. ನಂತರ ಯಾವುದೇ ತೊಂದರೆಯುಲ್ಲದೇ ಮಾತನಾಡುತ್ತ ಹೋಗಿ. ಸ್ಪೀಕರ್‌ನಲ್ಲಿ ಅದು ತರ್ಜುಮೆ ಮಾಡಿ ಹೇಳುತ್ತ ಹೋಗುತ್ತದೆ. ಫ್ರೆಂಚ್, ಜರ್ಮನ್, ಇಟಲಿಯನ್, ಪೋರ್ತುಗೀಸ್, ರಷ್ಯನ್, ಸ್ಪಾನಿಶ್ ಭಾಷೆಯಿಂದ ಇಂಗ್ಲಿಷ್‌ಗೆ ಹಾಗೂ ಇಂಗ್ಲಿಷ್‌ನಿಂದ ಈ ಭಾಷೆಗಳಿಗೆ ಭಾಷಾಂತರ ಮಾಡುತ್ತದೆ.

## ಸ್ಪಾಟಿಫೈ

ವಿಂಡೋಸ್ ಫೋನ್‌ನ ಈ ಸಂಗೀತದ ಆ್ಯಪ್‌ನಲ್ಲಿ ಸಂಗೀತವನ್ನು ಹುಡುಕುವ ಉತ್ತಮ ಟೂಲ್‌ಗಳಿವೆ. ಸಮಗ್ರ ಸಂಗೀತದ ಪಟ್ಟಿ ಇದೆ. ಧ್ವನಿ ಗುಣಮಟ್ಟವೂ ಚೆನ್ನಾಗಿದೆ. ವಿಂಡೋಸ್ ಫೋನ್ ಸ್ಟೋರ್‌ನಿಂದ ಉಚಿತವಾಗಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ಆದರೆ ಹಾಡು ಕೇಳಬೇಕಾದರೆ ಚಂದಾ ಕಟ್ಟಬೇಕು. 26 ಭಾಷೆಗಳಲ್ಲಿ ಲಭ್ಯ. ಫೇಸ್‌ಬುಕ್ ಖಾತೆ ಮೂಲಕ ಸೈನ್ ಇನ್ ಮಾಡಬಹುದು ಅಥವಾ ಅರ್ಜಿಯನ್ನು ಭರ್ತಿ ಮಾಡಬಹುದು. ಪರದೆಯ ಮೇಲೆ ಆಲ್ಬಂ, ಅದರ ಹಾಡುಗಾರನ ಹೆಸರು ಕಾಣಿಸಿಕೊಳ್ಳುತ್ತದೆ. ಆದರೆ ಲಾಕ್ ಮಾಡಿದರೆ ಇದನ್ನು ನೋಡಲು ಸಾಧ್ಯವಿಲ್ಲ. ರೇಡಿಯೊ ಮತ್ತು ಸ್ಕ್ಯಾಕರ್ ಡೂನಲ್ಲಿ ಈ ಸೌಲಭ್ಯ ಲಭ್ಯವಿದೆ.




## ಡ್ಯುಯೊಲಿಂಗೊ

ಭಾಷೆಯನ್ನು ಕಲಿಯುವವರಿಗೆ ಉಚಿತ ಐಫೋನ್ ಆ್ಯಪ್ ಇದು. ಡಚ್, ಡ್ಯಾನಿಶ್, ಫ್ರೆಂಚ್, ಜರ್ಮನ್, ಐರಿಶ್, ಇಟಾಲಿಯನ್, ಪೋರ್ತುಗೀಸ್, ಸ್ಪಾನಿಶ್ ಅಥವಾ ಸ್ವೀಡಿಶ್ ಭಾಷೆಯನ್ನು ಇದರ ಮೂಲಕ ಸುಲಭವಾಗಿ ಕಲಿಯಬಹುದು. ಇಂಗ್ಲಿಷ್ ಬಂದರೆ ಸಾಕು, ಉಳಿದ ಭಾಷೆಗಳನ್ನು ಈ ಆ್ಯಪ್ ಕಲಿಸುತ್ತದೆ. ಸ್ಪೀಕರ್ ಮೂಲಕ ಅದರ ಉಚ್ಚಾರವನ್ನು ಕಲಿಯಬಹುದು. ಪಾಠಗಳು ಸುಲಭ. ಇದರ ಐಕಾನ್ ಹಾಗೂ ವಿವರಣೆಗಳು ಚಿಕ್ಕದಾಗಿ ಚೊಕ್ಕದಾಗಿ ಕಾಣುತ್ತವೆ. ಶಾರ್ಟ್ ಫಾರ್ಮ್‌ಗಳನ್ನು ಬಳಸಲಾಗಿದೆ. ನಿಮಗೆ ಮುಗಿದ ಪಾಠಗಳು ಚಿನ್ನದ ಅಕ್ಷರಗಳಲ್ಲಿ ಕಾಣುತ್ತವೆ. ಬೇಕಿದ್ದರೆ ಪುನರ್‌ಮನನ ಮಾಡಬಹುದು. ನಿಮ್ಮ ಪ್ರಗತಿಯ ಮೇಲೂ ನಿಗಾ ಇಡುತ್ತದೆ. ಎಲ್ಲಾ ಭಾಷೆಗಳಲ್ಲಿ ಲಭ್ಯವಿಲ್ಲ. ಕ್ರೌಡ್ ಸೋರ್ಸ್ ಮಾಹಿತಿಯಾದ್ದರಿಂದ ಕೆಲವು ಅಡೆತಡೆಗಳಿವೆ.

## ಪಿನ್‌ಯು



ಸಮೀಪದಲ್ಲಿ ಸ್ನೇಹಿತರು ಹಾದು ಹೋದರೆ ಗುರುತಿಸಲೂ ಮೊಬೈಲ್ ಕ್ರೇಜ್ ಇದ್ದವರಿಗೆ ಪುರುಸೊತ್ತಿಲ್ಲ. ಅಂಥವರಿಗಾಗಿ ಪಿನ್‌ಯು ಎಂಬ ಆ್ಯಪ್ ಬಂದಿದ್ದು, ಇದು ಸಾಮಾಜಿಕ ಜಾಲತಾಣದಂತೆ ಕೆಲಸ ಮಾಡುತ್ತದೆ. ಈ ಆ್ಯಪ್ ಹೊಂದಿದ ಸ್ಮಾರ್ಟ್‌ಫೋನ್ ಪರದೆಯ ಮೇಲೆ 'ನಿಮ್ಮ ಸ್ನೇಹಿತ ಬಳಿಯಲ್ಲೇ ಇದ್ದಾನೆ' ಎಂಬ ಸಂದೇಶ ಮೂಡುತ್ತದೆ. ಇದನ್ನು ಲಂಡನ್ನಿನ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗಾಗಿ ರೂಪಿಸಲಾಗಿದ್ದು, ವಿಶ್ವವಿದ್ಯಾನಿಲಯದ ಇ-ಮೇಲ್ ವಿಳಾಸ ನೀಡಬೇಕಂತೆ. ಗೂಗ್ಲ್ ಪ್ಲೇ ಸ್ಟೋರ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾದ ಈ ಆ್ಯಪ್ ಶೀಘ್ರವೇ ಭಾರತದಲ್ಲೂ ಲಭ್ಯವಾಗಲಿದೆ.

■ ಎಸ್. ತುಂಬೆ